**ದಿನಾಂಕ: 02-02-2026ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಜೆ.ವಿ.ಹೆಚ್. ವಕೀಲರಿಂದ**

1. ಬಸಪ್ಪಗೌಡರಿಗೆ ಚನ್ನಮ್ಮ ಮತ್ತು ಬಸಮ್ಮ ಎಂಬ ಇಬ್ಬರು ಹೆಂಡತಿಯರು ಇರುತ್ತಾರೆ ಅವರ ಮದುವೆ ಯಾವಾಗ ಆಗಿದೆ ಎಂದು ಗೊತ್ತಿಲ್ಲ. ಚನ್ನಮ್ಮ ಜೀವಂತ ಇರುವಾಗ ಬಸಪ್ಪಗೌಡ ಬಸಮ್ಮಳಿಗೆ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಬಸಮ್ಮಳ ಮದುವೆ ಬಸಪ್ಪನ ಜೊತೆಯಲ್ಲಿ ಯಾವ ರೀತಿ ಯಾವಾಗ ಆಗಿದೆ ಎಂದು ಗೊತ್ತಿಲ್ಲ. 1976 ನೇ ಸಾಲಿನಲ್ಲಿ ಆಗಿದೆ ಎಂದು ಹೇಳುವಂತಹ ಪಾಲುಪತ್ರದಲ್ಲಿ ನಿಮ್ಮದಾಗಲೀ ನಿಮ್ಮ ತಂಗಿಯರದ್ದಾಗಲೀ ಸಹಿ ಇಲ್ಲ ಎಂದರೆ ಆಗ ನಾವು ಸಣ್ಣವರಿದ್ದೆವು ಎಂದು ಉತ್ತರಿಸುತ್ತಾರೆ. ಪಾಲುಪತ್ರದಲ್ಲಿ ಯಾರಯಾರ ಸಹಿ ಇದೆ ಎಂದು ಗೊತ್ತಿಲ್ಲ. ಪಾಲುಪತ್ರ ಆಗಿದೆ ಎಂದು ಹೇಳುವ ಸಂದರ್ಭದಲ್ಲಿ 1 ಮತ್ತು 2ನೇ ಪ್ರತಿವಾದಿಯ ಗಂಡನ ವಯಸ್ಸು ಎಷ್ಟು ಇತ್ತು ಎಂದು ಗೊತ್ತಿಲ್ಲ. 1976ರಲ್ಲಿ 1 ಮತ್ತು 2ನೇ ಪ್ರತಿವಾದಿಯ ಗಂಡ ಸಣ್ಣವರಿದ್ದರು. 1976 ರಲ್ಲಿ ಯಾವ ವಿಷಯಕ್ಕೆ ಮತ್ತು ಯಾವ ಕಾರಣಕ್ಕೆ ಪಾಲು ಪತ್ರ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಪಾಲು ಪತ್ರ ಆದ ಸಮಯದಲ್ಲಿ ನನ್ನ ತಾಯಿಯ ಮದುವೆ ಆಗಿತ್ತು. ಸದರಿ ಪಾಲುಪತ್ರದಲ್ಲಿ ಚನ್ನಮ್ಮ ಮತ್ತು ಬಸಮ್ಮಳ ಸಹಿ ಇರುವುದಿಲ್ಲ. ಪಾಲುಪತ್ರದಲ್ಲಿ ವಾದಿಯ ಸಹಿ ಏನಾದರೂ ಇದೆಯಾ ಎಂದರೆ ನಾವು ನೋಡಿಯೇ ಇಲ್ಲ ಎಂದು ಉತ್ತರಿಸುತ್ತಾರೆ.

2. ನೀವು ಈ ದಾವೆಯಲ್ಲಿ ಹಾಜರಾದ ನಂತರ ವಾದಿ ಈ ದಾವೆಯನ್ನು ಯಾವ ಕಾರಣಕ್ಕೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಿಮ್ಮ ಹೆಸರಿಗೆ ಆಸ್ತಿ ಮಾಡುವ ಸಮಯದಲ್ಲಿ ಸಬ್ ರಿಜಿಸ್ಟರ್ ಕಚೇರಿಯಲ್ಲಿ ನೊಂದಣಿ ದಾಖಲೆ ಆಗಲೀ ನ್ಯಾಯಾಲಯದ ಡಿಕ್ರಿ ಆಗಲೀ ಆ ತರಹದ್ದು ಏನೂ ಮಾಡಿಕೊಟ್ಟಿಲ್ಲ ಎಂದರೆ ಅದು ನಮಗೆ ಏನೂ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಬಸಪ್ಪಗೌಡನ ತಂದೆಯ ಹೆಸರು ಸುಬ್ರಾಯಗೌಡ ಇರುತ್ತದೆ. ದಾವಾದ

ಆಸ್ತಿ ಹಿರಿಯರ ಆಸ್ತಿ ಮತ್ತು ಸುಬ್ರಾಯಗೌಡನ ಆಸ್ತಿ ಎಂದರೆ ನನ್ನ ಪಾಲಿಗೆ ಬಂದಂತಹ ಆಸ್ತಿ ಸಂಗನಗೌಡನ ಆಸ್ತಿ ಇರುತ್ತದೆ.

3. ನಿಮ್ಮ ಪ್ರತಿವಾದ ಪತ್ರದಲ್ಲಿ ಮತ್ತು ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸ.ನಂ.29 ಮತ್ತು 33 ಸಂಗನಗೌಡನ ಆಸ್ತಿಗಳು ಎಂದು ಬರೆಸಿದ್ದೀರಾ ಎಂದರೆ ಬರೆಸಿಲ್ಲ ಮತ್ತು ನನಗೇನೂ ಗೊತ್ತಿಲ್ಲ. ನನಗೆ ಮತ್ತು ನನ್ನ ತಂಗಿಗೆ ಯಾರು ಕಲಿಸಿದ್ದಾರೆ ಎಂದು ಗೊತ್ತಿಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ ಆಗಲೀ ಮತ್ತು ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಆಗಲೀ ನಿಮಗೆ ಬಂದಂತಹ ಆಸ್ತಿಗಳು ನಿಮ್ಮ ತಂದೆಯಿಂದ ಬಂದಿದೆ ಎಂದು ಬರೆಸಿಲ್ಲ ಎಂದರೆ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿಗಳಾದ ಸ.ನಂ.29 ಮತ್ತು 33 ನಿಮ್ಮ ಹೆಸರಿಗೆ ಬರುವ ಮೊದಲು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಂಗನಗೌಡನ ಹೆಸರಿನಿಂದ ಬಸಪ್ಪಗೌಡನಿಂದ ನನಗೆ ಮತ್ತು ನನ್ನ ತಂಗಿಗೆ ಆಗಿದೆ ಎಂದು ಉತ್ತರಿಸುತ್ತಾರೆ. ಸಂಗನಗೌಡನು 2 ಆಸ್ತಿಗಳನ್ನು ನಿಮಗೆ ಬಿಟ್ಟುಕೊಟ್ಟಿರುವುದಾಗಲೀ ನಿಮ್ಮ ತಂದೆಗೆ ಬಿಟ್ಟುಕೊಟ್ಟಿರುವುದಾಗಲೀ ರಿಜಿಸ್ಟರ್ ದಾಖಲೆ ಆಗಲೀ ಕೋರ್ಟ್ ದಾಖಲೆ ಆಗಲೀ ಇಲ್ಲ. ಸಂಗನಗೌಡ ಯಾವಾಗ ತೀರಿಕೊಂಡಿದ್ದಾರೆ ಎಂದರೆ ನಾವು ಹುಟ್ಟುವುದಕ್ಕಿಂತ ಮೊದಲೇ ತೀರಿಕೊಂಡಿದ್ದಾರೆ. ಸಂಗನಗೌಡನಿಗೆ ಹೆಂಡತಿ ಮಕ್ಕಳು ಇರುವುದಿಲ್ಲ. ಸಂಗನಗೌಡ ಮತ್ತು ಬಸಪ್ಪಗೌಡ ಯಾವಾಗ ಭಾಗ ಆಗಿದ್ದಾರೆ ಮತ್ತು ಯಾರುಯಾರಿಗೆ ಎಷ್ಟೆಷ್ಟು ಆಸ್ತಿ ಹೋಗಿದೆ ಎಂದು ದಾಖಲೆ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿದ್ದೇವೆ ಎಂದು ಉತ್ತರಿಸುತ್ತಾರೆ. ಆ ರೀತಿ ಸದರಿ ಎರಡು ಆಸ್ತಿಗಳು ನಿಮ್ಮ ಹೆಸರಿಗೆ ಮಾಡುವ ಸಮಯದಲ್ಲಿ ವಾದಿಗೆ ನೋಟಿಸ್ ನೀಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

4. ದಾವಾದ ಆಸ್ತಿಗಳಲ್ಲಿ ವಾದಿಗೆ ಯಾವುದಾದರೂ ಆಸ್ತಿಯಲ್ಲಿ ಭಾಗ ಕೊಟ್ಟಿದ್ದಾರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ

ಎಂದು ಗೊತ್ತಿಲ್ಲ. ಈ ದಾವೆಯಲ್ಲಿ ಏನೇನು ಕಾಗದಗಳನ್ನು ಹಾಕಿದ್ದಾರೆ ಎಂದು ಗೊತ್ತಿಲ್ಲ. 1 ನೇ ಮತ್ತು 2ನೇ ಪ್ರತಿವಾದಿಯರು ಈ ದಾವೆಯಲ್ಲಿ ಏನು ಬರೆದು ಹಾಕಿದ್ದಾರೆ ಎಂದು ಗೊತ್ತಿಲ್ಲ. ಹಿರಿಯರ ಆಸ್ತಿಯಲ್ಲಿ ಬಸಮ್ಮಳಿಗೆ ಪಾಲು ಕೊಡಬೇಕು ಎಂದು ಬಸಮ್ಮ ಈ ಕೇಸನ್ನು ಹಾಕಿದ್ದಾಳೆ ಎಂದರೆ ಸರಿ. 1976ರಲ್ಲಿ ಯಾವುದೇ ಪಾಲು ಪತ್ರ ಆಗಿಲ್ಲ ಮತ್ತು ಸದರಿ ಪಾಲುಪತ್ರ ವಾದಿಯ ಒಪ್ಪಿಗೆಯ ಮೇರೆಗೆ ಆಗಿಲ್ಲ ಎಂದರೆ ಗೊತ್ತಿಲ್ಲ. ನಿಮ್ಮ ತಾಯಿ ಬಸಮ್ಮಳ ಮತ್ತು ಬಸಪ್ಪಗೌಡರಿಗೆ ಮದುವೆ ಆಗಿಲ್ಲದ್ದರಿಂದ ನಿಮಗಾಗಲೀ ನಿಮ್ಮ ತಂಗಿಗಾಗಲೀ ಸ.ನಂ.29 ಮತ್ತು 23 ಜಮೀನುಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ನಮ್ಮ ತಂದೆ ಮಾಡಿ ಇಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಹೆಸರಿಗೆ ಸದರಿ ಆಸ್ತಿಗಳನ್ನು ಮಾಡಿರುವ ದಾಖಲೆಗಳು ಏನಾದರೂ ಇದೆಯಾ ಎಂದರೆ ನಮ್ಮ ಅಣ್ಣ ನಮ್ಮ ತಂಗಿಗೆ ಬಿಟ್ಟುಕೊಟ್ಟಿದ್ದಾನೆ ಎಂದು ಸಹಿ ಮಾಡಿರುತ್ತಾನೆ ಎಂದು ಉತ್ತರಿಸುತ್ತಾರೆ. ಆ ರೀತಿ ಸಹಿ ಮಾಡಿದಂತಹ ದಾಖಲೆ ಇರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಿಮ್ಮ ಅಣ್ಣನಿಗೆ ಆ ರೀತಿ ದಾಖಲೆಯಲ್ಲಿ ಸಹಿ ಮಾಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನೀವು ಹೇಳಿದ ಪ್ರಕಾರ ಯಾವುದೇ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾವಾದ ಆಸ್ತಿಗಳು ಹಿರಿಯರ ಆಸ್ತಿಗಳು ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ